**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5028/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಲೋಕೇಶ್.ಎಂ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಆರ್. ಮಹದೇವಯ್ಯ | **25.04.2026** |
| **ವಯಸ್ಸು** | : | 50 ವರ್ಷ | |
| **ವೃತ್ತಿ** | : | ಎ ಎಸ್ ಐ, ಚಾ.ನಗರ ಪಟ್ಟಣ ಪೊ.ಠಾಣೆ | **ಫ್ರಾ.ಸಾಃ 13** |
| **ವಾಸ ಸ್ಥಳ** | : | ಚಾಮರಾಜನಗರ | **ಚಾ.ಸಾಃ 43** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ದಿಃ 01.07.2022 ರಿಂದ ಆಗಸ್ಟ್-2024 ರವರೆಗೆ ಮುಖ್ಯಪೇದೆ ಆಗಿ ಕೊಳ್ಳೇಗಾಲ ಪಟ್ಟಣ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 01.06.2024 ರಂದು ನಾನು ಠಾಣಾ ಕರ್ತವ್ಯದಲ್ಲಿದಾಗ ರಾತ್ರಿ 12.30 ಗಂಟೆ ಸಮಯದಲ್ಲಿ ಚಾಸಾ 45 ರವರು ಸ್ವೀಕರಿಸಿರುವ ದೂರನ್ನು ಚಾಸಾ 42 ರವರ ಮೂಲಕ ಠಾಣೆಗೆ ಕಳುಹಿಸಿದ್ದು, ನಾನು ಸದರಿ ಪಿರ್ಯಾದನ್ನು ಸ್ವೀಕರಿಸಿ ಠಾಣಾ ಮೊ.ನಂ. 113/2024 ರಲ್ಲಿ ಪ್ರಕರಣವನ್ನು ನೊಂದಾಯಿಸಿರುತ್ತೇನೆ. ಪಿರ್ಯಾದನ್ನು ನಿಪಿ 1 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ 38 ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ 38(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ  ಪಿ ಕೆ ಎಸ್   ವಕೀಲರಿಂದ**

ಪಿರ್ಯಾದನ್ನು ಮೊಹರು ಮಾಡಿದ ಲಕೋಟೆಯಲ್ಲಿ ಸಲ್ಲಿಸಿರುವುದಿಲ್ಲ. ನನ್ನ ಮುಂದೆ ಯಾವುದೇ ದೂರನ್ನು ಹಾಜರುಪಡಿಸಿರುವುದಿಲ್ಲ, ನಾನು ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ